ಸರಕಾರಕ್ಕೆ ಇದೆ.

ಆ) ಇಂತಹ ಪ್ರಕರಣಗಳಲ್ಲಿ ಸ್ವಲ್ಪ ಮಟ್ಟಿನ ಏರಿಕೆ ಇದೆ.

ಇ) ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಪ್ರಕರಣಗಳನ್ನು ಎಸ್.ಪಿ.ದರ್ಜೆಯ ಅಧಿಕಾರಿ ತನಿಖೆ ಮಾಡುತ್ತಾರೆ. ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಸಿ.ಓ.ಡಿ ತನಿಖೆ ಮಾಡುತ್ತಿದೆ.

ವಿಷಯ :- ಪೆನ್ನಾರ್ ಕಾಲುವೆ ಕೃಷ್ಣ ನದಿ ನೀರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1567 (2346)

ಶ್ರೀ ಬಸನಗೌಡ ಪಾಟೀಲ್(ವಿಜಾಪುರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ನದಿನೀರನ್ನು ಪೆನ್ನಾರ್ ಕಾಲುವೆಗೆ ಜೋಡಿಸುವ ಬಗ್ಗೆ ಸರ್ವೇಕ್ಷಣ ಕಾರ್ಯ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಲ್ಲಿ ಸರ್ಕಾರದ ಕ್ರಮಗಳೇನು?

ಇ) ಈ ನದಿ ನೀರನ್ನು ಪೆನ್ನಾರ್ ಕಾಲುವೆಗೆ ಜೋಡಿಸಿದಲ್ಲಿ ರಾಜ್ಯದ ಹಿತಕ್ಕೆ ಧಕ್ಕೆ ಆಗುವುದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಬಂದಿದೆ

ಆ) ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ ತಯಾರಿಸಿರುವ ಪ್ರಾಥಮಿಕ ತನಿಖಾ ವರದಿ (ಪ್ರಿಫೀಸಿಬಿಲಿಟಿ ರಿಪೋರ್ಟ್)ಯಲ್ಲಿ ಕಂಡು ಬಂದಿರುವ ತಾಂತ್ರಿಕ ನ್ಯೂನತೆಗಳನ್ನು ಸರಿಪಡಿಸುವ ಬಗ್ಗೆ ಸಂಸ್ಥೆಗೆ ಕೋರಲಾಗುತ್ತಿದೆ.

ಇ)ರಾಜ್ಯದ ಹಿತಕ್ಕೆ ಧಕ್ಕೆ ಆಗದಂತೆ ಕಾಪಾಡುವುದು.

ವಿಷಯ :- ಕೃಷ್ಣ ಮೇಲ್ದಂಡೆ ಯೋಜನೆ ಭೂಸ್ವಾಧೀನಾಧಿಕಾರಿಗಳು ಇಲ್ಲದೆ ರೈತರಿಗೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1568(758)

ಶ್ರೀ ಬಸನಗೌಡ ಪಾಟೀಲ್(ವಿಜಾಪುರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ ರಾಂಪೂರ ಬಾಗಲಕೋಟೆ ತಾಲ್ಲೂಕು ಇಲ್ಲಿ ಭೂಸ್ವಾಧೀನಾಧಿಕಾರಿಗಳು ಇಲ್ಲದೆ ರೈತರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮಕ್ಕೆ ಬಂದಿದೆಯೇ.

ಆ)ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಬಂದಿದೆ

ಆ) ಸೂಕ್ತ ಅಧಿಕಾರಿಯನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ:- ಇಂಡಿ ತಾಲ್ಲೂಕಿನ ಏತ ನೀರಾವರಿಗಳು